# ಶಿಲ್ಪಕಲೆಯಲ್ಲಿ
# ಮಹಿಷಮರ್ದಿನಿ

**ಕರ್ನಾಟಕದ ನೂರಾರು ದೇಗುಲಗಳಲ್ಲಿ ಮತ್ತು ಹೊರಭಿತ್ತಿಗಳಲ್ಲಿ ಮಹಿಷಮರ್ದಿನಿಯ ವಿಗ್ರಹವು ಪ್ರಮುಖವಾಗಿ ಗಮನ ಸೆಳೆಯುತ್ತಿದೆ.**

■ **ಟಿ.ಎಸ್. ಗೋಪಾಲ್**
ಚಿತ್ರಗಳು: ಕೆಂಗೇರಿ ಚಕ್ರಪಾಣಿ ಮತ್ತು ಲೇಖಕರದ್ದು


ಹಂಪಿ ಹಜಾರರಾಮ ದೇವಾಲಯ

ವೇದಕಾಲದಲ್ಲಿ ದೇವತೆಗಳೆಂದರೆ ಪುರುಷರೇ. ವೇದಗಳಲ್ಲಿ ಲಕ್ಷ್ಮೀ, ಸರಸ್ವತಿ ಮೊದಲಾದ ದೇವಿಯರ ಪ್ರಸ್ತಾಪವಿದ್ದರೂ, ಆ ದೇವಿಯರಿಗೆಲ್ಲ ವರ್ತಮಾನದಲ್ಲಿ ಸಿಗುತ್ತಿರುವಷ್ಟು ಪ್ರಾಮುಖ್ಯ ಸಿಕ್ಕಿರಲಿಲ್ಲ. ನಿತ್ಯಜೀವನದಲ್ಲಿ ಮಾತೃಪ್ರಧಾನ ಕುಟುಂಬಗಳನ್ನು ಹೊಂದಿದ್ದುದರಿಂದ ಸ್ತ್ರೀಯರಿಗೂ ದೇವತೆಯರ ಸ್ಥಾನಮಾನಗಳನ್ನು ಜನಪದರೇ ಕಲ್ಪಿಸಿಕೊಟ್ಟರು. ಎಲ್ಲೆಡೆ ಸ್ತ್ರೀರೂಪದ ಗ್ರಾಮದೇವತೆಗಳು ಕಾಣಿಸಿಕೊಂಡು ಜನಸಾಮಾನ್ಯರನ್ನು ಕಾಯಿಲೆ–ಕಸಾಲೆಗಳಿಂದ ರಕ್ಷಿಸುವ ಹೊಣೆ ಹೊತ್ತವು. ಇದರ ಪರಿಣಾಮ–ವಾಗಿಯೋ ಏನೊ, ವೇದೋಪನಿಷತ್ತುಗಳ ನಂತರದ ಪುರಾಣಗಳಲ್ಲಿ ದೇವಿಯ ಮಹತ್ವ ಗೋಚರಿಸತೊಡಗಿತು. ಸ್ಥಳೀಯ ದೇವತೆಯಾಗಿದ್ದ ದೇವಿ ಜಗನ್ಮಾತೆಯಾಗಿ, ಎಲ್ಲರ ಅಮ್ಮನಾಗಿ ಗುರುತಿಸಲ್ಪಟ್ಟಿತು. ದುರ್ಗಾ, ಲಕ್ಷ್ಮೀ, ಸರಸ್ವತಿ ಮೊದಲಾದ ವಿದ್ಯಾದೇವತೆಯರೂ, ವಾರಾಹಿ, ಬ್ರಾಹ್ಮಿ, ವಾರುಣಿ ಮುಂತಾದ ಸಪ್ತಮಾತೃಕೆಯರೂ, ಕಾತ್ಯಾಯನಿ, ಮಹಾಗೌರಿ ಮೊದಲಾದ ನವದುರ್ಗೆಯರೂ ಪುರಾಣಗಳಲ್ಲಿ ವರ್ಣಿತರಾದರು.

ಶಕ್ತಿದೇವತೆ ದುರ್ಗೆಗೆ ಸಂಬಂಧಿಸಿದ ಎಲ್ಲ ಕಥೆಗಳೂ ರಾಕ್ಷಸ ಸಂಹಾರ–ದೊಡನೆ ತಳುಕು ಹಾಕಿಕೊಂಡಿವೆ. ದುರ್ಗ ಎನ್ನುವುದೇ ಒಬ್ಬ ರಾಕ್ಷಸನ ಹೆಸರು. ಪುರುಷರಿಂದ ಸಾವು ಬರದಂತೆ ವರ ಪಡೆದು ಬೀಗುತ್ತಿದ್ದ ದುರ್ಗನನ್ನು ಕೊಂದದ್ದರಿಂದಲೇ ದೇವಿಗೆ ದುರ್ಗೆ ಎನ್ನುವ ಹೆಸರು ಬಂತು. ಹೀಗೆಯೇ ಮಹಿಷ, ಶುಂಭ, ನಿಶುಂಭ, ದಾರುಕ, ಚಂಡ, ಮುಂಡರೇ ಮೊದಲಾದ ದೈತ್ಯರನ್ನು ಸಂಹರಿಸಿದ ಖ್ಯಾತಿ ಪಡೆದ ದುರ್ಗೆಯ ವಿವಿಧ ಅವತಾರಗಳ ಕಥಾನಕಗಳು ರಾಮಾಯಣ, ಮಹಾಭಾರತದ ಪ್ರಸಂಗಗಳಂತೆಯೇ ದೇಶಾದ್ಯಂತ ಪ್ರಚಲಿತವಾದುವು.

ದುರ್ಗೆಯ ರೂಪಗಳಲ್ಲಿ ಒಂದಾದ ಚಾಮುಂಡೇಶ್ವರಿ ಮೈಸೂರು ಅರಸರ ಮನೆದೇವರೆನಿಸಿಕೊಂಡು ನಾಡದೇವಿಯೂ ಆಗಿ ಪೂಜಾರ್ಹಳಾದಳು. ಆಕೆಗೆ ಮಹಿಷಮರ್ದಿನಿಯೆಂಬ ಕೀರ್ತಿ ತಂದುಕೊಟ್ಟ ಮಹಿಷಾಸುರನಿಗೂ ಮೈಸೂರಿನ ಪಾರಂಪರಿಕ ಸ್ಮಾರಕಗಳ ಪಟ್ಟಿಯಲ್ಲಿ ಸ್ಥಾನ ದೊರಕಿತು.

## ರಾಜ್ಯದ ದೇವಾಲಯಗಳಲ್ಲಿ..

ಕರ್ನಾಟಕದ ವಿವಿಧ ದೇವಾಲಯಗಳಲ್ಲಿ ಕಂಡುಬರುವ ಮಹಿಷಾಸುರ ಮರ್ದಿನಿಯ ಶಿಲ್ಪಗಳು ಈ ಕಥೆಯ ವಿವರಗಳನ್ನು ಅನುಸರಿಸಿ ರೂಪುಗೊಂಡಂತೆ ತೋರುತ್ತವೆ. ಬಾದಾಮಿ ಚಾಲುಕ್ಯರ ಕಾಲದ (ಕ್ರಿ.ಶ.7ನೆಯ ಶತಮಾನ) ಐಹೊಳೆಯ ದುರ್ಗಾ ದೇವಾಲಯದಲ್ಲಿರುವ

**(36ನೇ ಪುಟ ನೋಡಿ)**


ಮಧುಗಿರಿಯ ಮಲ್ಲೇಶ್ವರ ದೇವಾಲಯ